<u>**ಕರ್ನಾಟಕ ವಿಧಾನ ಪರಿಷತ್ತು**</u>

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 297(341)
2) ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 29-01-2026
4) ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿ 2 ಗಂಟೆ ಇದ್ದು, ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿಯು 1 ಗಂಟೆ 30 ನಿಮಿಷ ನಿಗಧಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಯಾವ ಕಾರಣಕ್ಕಾಗಿ ಒಂದೇ ವೃಂದದ ಪರೀಕ್ಷೆಗಳಿಗೆ ಬೇರೆ-ಬೇರೆ ಕಾಲಾವಧಿ ನಿಗಧಿಪಡಿಸಲಾಗಿದೆ;(ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 43 ಸೇವನೆ 2020 ದಿನಾಂ 05.03.2021 ರಲ್ಲಿ ವಿವಿಧ ಗ್ರೂಪ್ 'ಸಿ' ವೃಂದದ ತಾಂತ್ರಿಕ ಮತ ತಾಂತ್ರಿಕೇತರ ಹುದ್ದೆಗಳಿಗೆ ಸಾಮಾನ್ಯ ಜ್ಞಾನ ಪರೀಕ್ಷಾ ಪಠ್ಯ ಕ್ರ ಹಾಗೂ ಪ್ರಶ್ನೆ ಪತ್ರಿಕೆ-1 ಮತ್ತು ಪ್ರಶ್ನೆ ಪತ್ರಿಕೆ-2 ಎರಡಕ್ಕೂ, ಗರಿಷ ಹಾಗೂ ಕನಿಷ್ಠ ಅಂಕಗಳನ್ನು ಮತ್ತು ಋಣಾತ್ಮಕ ಅಂಕಗಳನ ನೀಡುವ ಬಗ್ಗೆ ನಿಗದಿಪಡಿಸಲಾಗಿದ್ದು, ಪರೀಕ್ಷಾ ಕಾಲಾವಧಿಯ ಬ ನಿರ್ದೇಶನವಿರುವುದಿಲ್ಲ.<br><br>ಆದ್ದರಿಂದ **ಕರ್ನಾಟಕ ಪರೀಕ್ಷಾ ಪ್ರಾಧಿಕಾರವು** ಸದರಿ ಸಂಸ್ಥೆಯ **ನಿಯಮಗಳಂತೆ** ಪರೀಕ್ಷೆಗೆ ಉತ್ತರಿಸಲು 120 ನಿಮಿಷಗಳನ ನಿಗಧಿಗೊಳಿಸಿರುತ್ತದೆ.<br><br>**ಕರ್ನಾಟಕ ಲೋಕಸೇವಾ ಆಯೋಗವು** ಒಂದು ಸಾಂವಿಧಾನಿ ಸಂಸ್ಥೆಯಾಗಿದ್ದು, ಸಾಮಾನ್ಯ ಜ್ಞಾನ ಪತ್ರಿಕೆ-1ಕ್ಕೆ 1 ಗಂಟೆ 3 ನಿಮಿಷಗಳು ಮತ್ತು ಪ್ರಶ್ನೆ ಪತ್ರಿಕೆ-2ಕ್ಕೆ 2 ಗಂಟೆಗಳ ಪರೀಕ್ಷಾ ಅವಧಿಯನ್ನು ನಿಗಧಿಗೊಳಿಸಿರುತ್ತದೆ. |
| ಆ. | ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿಯು 1 ಗಂಟೆ 30 ನಿಮಿಷ ನಿಗಧಿ ಪಡಿಸಿರುವುದರಿಂದ ಲಕ್ಷಾಂತರ ಸ್ಪರ್ಧಾರ್ಥಿಗಳಿಗೆ ಅನಾನುಕೂಲವಾಗುತ್ತಿರುವು ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಸರ್ಕಾರದ ಕ್ರಮಗಳನ್ನು ವಿವರವಾಗಿ ಮತ್ತು ಸ್ಪಷ್ಟವಾಗಿ ವಿವರಿಸುವುದು; | ಪ್ರತಿ ನಿರ್ದಿಷ್ಟ ಪರೀಕ್ಷೆಯಲ್ಲಿ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿ ಸಮಾನ ಕಾಲಾವಕಾಶ ನೀಡಿರುವುದರಿಂದ ಹಾಗು ಈ ವಿಷಯದ ಬಗೆ ಯಾವುದೇ ದೂರು/ಆಕ್ಷೇಪಣೆ/ಮನವಿ ಸರ್ಕಾರದಲ ಸ್ವೀಕೃತವಾಗಿಲ್ಲದಿರುವುದರಿಂದ ಸಾಮಾನ್ಯ ಜ್ಞಾನದ ಪರೀಕ್ಷೆಯ ಕಾಲಾವಧಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂ ಇರುವುದಿಲ್ಲ. |
| ಇ. | ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿಯಂತೆ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿಯನ್ನು 2 ಗಂಟೆಗಳಿಗೆ ನಿಗಧಿಪಡಿಸಲು ಇರುವ ಅಡಚಣೆಗಳಾದರೂ ಏನು; ಸಮಯ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಕಾಲಾವಧಿ ಹೆಚ್ಚಿಸಿ ಆದೇಶ ಹೊರಡಿಸಲಾಗುವುದು? | |

**ಸಂಖ್ಯೆ: ಸಿಆಸುಇ 16 ಎಸ್‌ಎಲ್‌ಎ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ